www.ecourtsindia.com

# ಪ್ರಧಾನ ವ್ಯವಹಾರ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊಸನಗರ

## ಸಿ.ಸಿ. ನಂ.825/2019

ಪಿರ್ಯಾದುದಾರರುಃ ಬಪಿ.ಟಿ.ಪ್ರಕಾಶ್ ಬಿನ್ ತಿಮ್ಮಪ್ಪಯ್ಯ,
ವಯಸ್ಸು 56 ವರ್ಷ,
ವಾಸಃ ಬಂಡಿಗೆ ವಾಸ, ಆಡುಗೋಡಿ ಗ್ರಾಮ,
ಮತ್ತಿಕೈ ಅಂಚೆ, ಹೊಸನಗರ ತಾಲ್ಲೂಕು.

ವಿರುದ್ಧ

ಆರೋಪಿತರುಃ ಬಿ.ಟಿ. ಗಣೇಶ್

## ದೋಷಾರೋಪಣೆ

**ಶ್ರೀ ರವಿಕುಮಾರ, ಕೆ ಬಿ.ಎ.ಎಲ್., ಎಲ್.ಎಲ್.ಬಿ., ಪ್ರಧಾನ ವ್ಯವಹಾರ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊಸನಗರ ಆದ ನಾನು ಈ ಕೆಳಕಂಡ ಆರೋಪಿತರಾದ,**

ಬಿ.ಟಿ. ಗಣೇಶ ಬಿನ್ ತಮ್ಮಪ್ಪಯ್ಯ,
ವಾಸಃ ಆಡುಗೋಡಿ ಗ್ರಾಮ,
ಮತ್ತಿಕೈ, ನಗರ ಹೋಬಳಿ, ಹೊಸನಗರ ತಾಲ್ಲೂಕು.

ನಿಮ್ಮ ಮೇಲೆ ಕೆಳಕಂಡ ಆರೋಪಣೆಯನ್ನು ಇಟ್ಟಿರುತ್ತೇನೆಃ–

ದಿನಾಂಕಃ 18.12.2016 ರಂದು ಚಾಸಾ.1 ಬಿ.ಟಿ. ಪ್ರಕಾಶ್ ರವರು ಸರ್ವೆ ನಂ.8 ರಲ್ಲಿ ತಮ್ಮ ಜಮೀನಿನಲ್ಲಿ ಕೂಲಿ ಆಳುಗಳನ್ನು ತೋಟದ ಕೆಲಸವನ್ನು ಮಾಡಲು ಹೋಗಿದ್ದಾಗ ಆರೋಪಿಯಾದ ಬಿ.ಟಿ.ಗಣೇಶ್ ನೀವು ಚಾಸಾ.1 ಬಿ.ಟಿ. ಪ್ರಕಾಶ್ ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿ, ನಂತರ ದಿನಾಂಕಃ 03.01.2017 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಚಾಸಾ.1 ಬಿ.ಟಿ. ಪ್ರಕಾಶ್ ರವರು ಕೂಲಿ ಆಳು ಹಾಗೂ ಚಾಸಾ.1 ಬಿ.ಟಿ. ಪ್ರಕಾಶ್ ಅಣ್ಣ ರಾಮಚಂದ್ರಯ್ಯ ರವರುಗಳು ತೋಟದ ವ್ಯವಸಾಯ ಮಾಡಲು ಹೋಗಿದ್ದಾಗ ಆರೋಪಿ ಬಿ.ಟಿ.ಗಣೇಶ್ ನೀವು ಪುನಃ ಚಾಸಾ.1 ಬಿ.ಟಿ. ಪ್ರಕಾಶ್ ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 447 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆಯನ್ನು ಇಟ್ಟಿರುತ್ತೇನೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ದಿನಾಂಕಃ 18.12.2016 ರಂದು ಚಾಸಾ.1 ಬಿ.ಟಿ. ಪ್ರಕಾಶ್ ರವರು ಸರ್ವೆ ನಂ.8 ರಲ್ಲಿ ಚಾಸಾ.1 ರವರು ತಮ್ಮ ಜಮೀನಿನಲ್ಲಿ ಕೂಲಿ ಆಳುಗಳನ್ನು ತೋಟದ ಕೆಲಸವನ್ನು ಮಾಡಲು ಹೋಗಿದ್ದಾಗ ಆರೋಪಿಯಾದ ಬಿ.ಟಿ.ಗಣೇಶ್ ನೀವು ಚಾಸಾ.1 ಬಿ.ಟಿ. ಪ್ರಕಾಶ್ ರವರ ಜಮೀನಿಗೆ ಬಂದು ಆಳುಗಳನ್ನು ಹಾಗೂ ಚಾಸಾ.1 ಬಿ.ಟಿ. ಪ್ರಕಾಶ್ ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ನಂತರ ದಿನಾಂಕಃ 03.01.2017 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಚಾಸಾ.1 ಬಿ.ಟಿ. ಪ್ರಕಾಶ್

This is a True Copy of the Court Records Online. Authenticated @ districts.ecourtsindia.com/cnr/KASM200011492019/truecopy/order-1.pdf

ರವರು ಕೂಲಿ ಅಳು ಹಾಗೂ ಚಾಸಾ.1 ಬಿ.ಟಿ. ಪ್ರಕಾಶ್ ರವರಿಗೆ ಸೂಳೆ ಮಗನೇ, ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆಯನ್ನು ಇಟ್ಟಿರುತ್ತೇನೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ದಿನಾಂಕಃ 18.12.2016 ರಂದು ಚಾಸಾ.1 ಬಿ.ಟಿ. ಪ್ರಕಾಶ್ ರವರು ಸರ್ವೆ ನಂ.8 ರಲ್ಲಿ ಚಾಸಾ.1 ರವರು ತಮ್ಮ ಜಮೀನಿನಲ್ಲಿ ಕೂಲಿ ಅಳುಗಳನ್ನು ತೋಟದ ಕೆಲಸವನ್ನು ಮಾಡಲು ಹೋಗಿದ್ದಾಗ ಆರೋಪಿಯಾದ ಬಿ.ಟಿ.ಗಣೇಶ್ ನೀವು ಚಾಸಾ.1 ಬಿ.ಟಿ. ಪ್ರಕಾಶ್ ರವರ ಜಮೀನಿಗೆ ಬಂದು ತಂತಿ ಮತ್ತು ಕಲ್ಲು ಕಂಬಗಳನ್ನು ಹಾಳು ಮಾಡಿ ಸುಮಾರು 3,000/- ರೂ. ನಷ್ಟವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 427 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆಯನ್ನು ಇಟ್ಟಿರುತ್ತೇನೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ದಿನಾಂಕಃ 18.12.2016 ರಂದು ಚಾಸಾ.1 ಬಿ.ಟಿ. ಪ್ರಕಾಶ್ ರವರು ಸರ್ವೆ ನಂ.8 ರಲ್ಲಿ ಚಾಸಾ.1 ರವರು ತಮ್ಮ ಜಮೀನಿನಲ್ಲಿ ಕೂಲಿ ಅಳುಗಳನ್ನು ತೋಟದ ಕೆಲಸವನ್ನು ಮಾಡಲು ಹೋಗಿದ್ದಾಗ ಆರೋಪಿಯಾದ ಬಿ.ಟಿ.ಗಣೇಶ್ ನೀವು ಚಾಸಾ.1 ಬಿ.ಟಿ. ಪ್ರಕಾಶ್ ರವರಿಗೆ ಈ ದಿನ ನೀನು ಬದುಕಿಕೊಂಡೆ ಇನ್ನೊಮ್ಮೆ ಮತ್ತೆ ತೋಟದ ಕೆಲಸ ಮಾಡಲು ಆರಂಭಿಸಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪಣೆಯನ್ನು ಇಟ್ಟಿರುತ್ತೇನೆ

ಸದರಿ ಅಪರಾಧಗಳು ಈ ನ್ಯಾಯಾಲಯದ ವಿಚಾರಣಾ ವ್ಯಾಪ್ತಿಗೆ ಬರುವುದರಿಂದ ನಿಮ್ಮನ್ನು ವಿಚಾರಣೆಗೆ ಹಾಜರಾಗಲು ನಿರ್ದೇಶಿಸುತ್ತೇನೆ.

ಆರೋಪಿತರಿಗೆ ದಿನಾಂಕ **20-07-2023** ರಂದು ಅವರು ತಿಳಿದ ಭಾಷೆಯಾದ ಕನ್ನಡದಲ್ಲಿ ಓದಿ , ವಿವರಿಸಿ, ಅರ್ಥೈಸಿ ತೆರೆದ ನ್ಯಾಯಾಲಯದಲ್ಲಿ ಹೇಳಲಾಯಿತು.

**20-07-2023**

**(ರವಿಕುಮಾರ ಕೆ)**

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಹಾಗೂ ಪ್ರಥಮ**

**ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊಸನಗರ.**

This is a True Copy of the Court Records Online. Authenticated @ districts.ecourtsindia.com/cnr/KASM200011492019/truecopy/order-1.pdf

www.ecourtsindia.com

**ಪ್ರಧಾನ** ವ್ಯವಹಾರ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೊಸನಗರ

**ಸಿ.ಸಿ. ನಂ.**825/2019

ಬಿ.ಟಿ. ಗಣೇಶ ಬಿನ್ ತಮ್ಮಪ್ಪಯ್ಯ,
ವಾಸಃ ಆಡುಗೋಡಿ ಗ್ರಾಮ,
ಮತ್ತಿಕೈ, ನಗರ ಹೋಬಳಿ, ಹೊಸನಗರ ತಾಲ್ಲೂಕು.

ಮೇಲಿನ, ಆರೋಪಣೆಗೆ ಆರೋಪಿಯ ಹೇಳಿಕೆ ಈ ಕೆಳಗಿನಂತಿದೆಃ

ಪ್ರಶ್ನೆಃ1 ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ ತಿಳಿಯಿತು

ಪ್ರಶ್ನೆಃ2 ಸದರೀ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕು

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ 20-07-2023 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

20-07-2023

**ಪ್ರಧಾನ** ವ್ಯವಹಾರ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊಸನಗರ.

www.ecourtsindia.com
This is a True Copy of the Court Records Online. Authenticated @ districts.ecourtsindia.com/cnr/KASM200011492019/truecopy/order-1.pdf

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com

**This is a True Copy of the Court Records Online. Authenticated @ districts.ecourtsindia.com/cnr/KASM200011492019/truecopy/order-1.pdf**